# ಕರ್ನಾಟಕ ಸರ್ಕಾರ

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್–2/ಡಿಇ/234/2022/ಎ.ಆರ್.ಇ–11

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು–560001.
ದಿನಾಂಕ: 04ನೇ ಜುಲೈ 2023.

## –:: ಶಿಫಾರಸು ::–

ವಿಷಯ: ಆಪಾದಿತ ಸರ್ಕಾರಿ ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

ಉಲ್ಲೇಖ: (1) ಸರ್ಕಾರಿ ಆದೇಶ ಸಂಖ್ಯೆ:ಕಂಇ 27 ಬಿಡಿಪಿ 2022, ಬೆಂಗಳೂರು, ದಿನಾಂಕ: 02/09/2022.

(2) ಉಪಲೋಕಾಯುಕ್ತ, ಕರ್ನಾಟಕ ರಾಜ್ಯ, ಬೆಂಗಳೂರು ರವರ ನಾಮನಿರ್ದೇಶನ ಆದೇಶ ಸಂಖ್ಯೆ.ಉಪಲೋಕ್–2/ಡಿಇ/ 234/2022, ಬೆಂಗಳೂರು, ದಿನಾಂಕ: 12/09/2022.

(3) ಅಪರ ನಿಬಂಧಕರು ವಿಚಾರಣೆಗಳು–11, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವಿಚಾರಣಾ ವರದಿ ದಿನಾಂಕ: 23/06/2023.

*****

ಸರ್ಕಾರದ ಆದೇಶ ದಿನಾಂಕ: 02/09/2022 ರಂತೆ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು ಅಂದರೆ

ಚಿಕ್ಕದಾಗಿ 'ಆ.ಸ.ನೌಕರರು' ಎಂದು ಸಂಭೋದಿಸಲಾಗುವುದು) ರವರ ವಿರುದ್ಧ ಶಿಸ್ತು ಪ್ರಕ್ರಿಯೆಯನ್ನು ಕೈಗೊಂಡು ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಈ ಸಂಸ್ಥೆಗೆ ಇಲಾಖಾ ವಿಚಾರಣೆಯನ್ನು ವಹಿಸಿರುತ್ತದೆ.

2. ಈ ಸಂಸ್ಥೆಯ ನಾಮನಿರ್ದೇಶನ ಆದೇಶ ಸಂಖ್ಯೆ:ಉಪಲೋಕ್-2/ಡಿಇ/234/2022, ಬೆಂಗಳೂರು, ದಿನಾಂಕ: 12/09/2022ರ ರೀತ್ಯಾ ಅಪರ ನಿಬಂಧಕರು ವಿಚಾರಣೆಗಳು-11 ರವರಿಗೆ ಆ.ಸ.ನೌಕರರ ವಿರುದ್ಧ ದೋಷಾರೋಪಣಾ ಪಟ್ಟಿ ತಯಾರು ಮಾಡಿ, ವಿಚಾರಣೆ ನಡೆಸಿ, ವರದಿ ಸಲ್ಲಿಸುವಂತೆ ಆದೇಶ ಹೊರಡಿಸಲಾಗಿರುತ್ತದೆ.

3. ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರ ವಿರುದ್ಧ ಈ ಕೆಳಗಿನ ದೋಷಾರೋಪಣೆಗಾಗಿ ಇಲಾಖಾ ವಿಚಾರಣೆಯನ್ನು ನಡೆಸಲಾಯಿತು.

<u>**ಅನುಬಂಧ-1**</u>

<u>**ದೋಷಾರೋಪಣೆ**</u>

ಆಪಾದಿತ ಸರ್ಕಾರಿ ನೌಕರರಾದ ಎನ್ ಎಂ ಕಿರಣಕುಮಾರ್ ಬಿನ್ ಎಂ. ಮುನಿಯಪ್ಪ, ಆದ ನೀವು 2018 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಹೊಸೂರು ಹೋಬಳಿ ಯಲ್ಲಿ ರಾಜಸ್ವ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ದೂರುದಾರರ ಅಣ್ಣನಾದ ಅಂಜಿನಪ್ಪರವರ ಹೆಸರಿನಲ್ಲಿ ಕದರನಹಳ್ಳಿ ಗ್ರಾಮದ ಸರ್ವೆ ನಂ.20ರಲ್ಲಿ 3-05ಎಕರೆ ಜಮೀನು 1996ನೇ ಸಾಲಿನಲ್ಲಿ ಸರಕಾರದಿಂದ ಮಂಜೂರಾಗಿದ್ದು, ಅಂದಿನಿಂದ ಇದುವರೆವಿಗೂ ಸದರಿ ಜಮೀನಿನ ಅನುಭವದಲ್ಲಿರುವ ದೂರುದಾರರ ಅಣ್ಣನ ಹೆಸರಿಗೆ ಸಾಗುವಳಿ ಚೀಟಿ ನೀಡದಿರುವುದರಿಂದ, ಸಾಗುವಳಿ ಚೀಟಿಗಾಗಿ 4-5 ಬಾರಿ ದೂರುದಾರರು ಮತ್ತು ಅವರ ಅಣ್ಣನವರು ಆಪಾದಿತ ಸರ್ಕಾರಿ ನೌಕರರಾದ ನಿಮ್ಮನ್ನು ಭೇಟಿ ಮಾಡಿ ವಿಚಾರಿಸಲಾಗಿ, ಲಂಚದ ಹಣ ನೀಡಿದರೆ ಮಾತ್ರ ದೂರುದಾರರ ಕೆಲಸ ಮಾಡಿಕೊಡುತ್ತೇನೆಂದು ತಿಳಿರುತ್ತೀರಿ. ನಂತರ ದಿನಾಂಕ: 11/12/2017ರಂದು ಮಧ್ಯಾಹ್ನ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಸಾಗುವಳಿ ಚೀಟಿ ಬಗ್ಗೆ ಅ.ಸ.ನೌರವರಾದ ನಿಮ್ಮನ್ನು ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಿ ವಿಚಾರಿಸಿದಾಗ, ನೀವು 35,000/- ರೂ.ಗಳ ಲಂಚದ ಹಣ ನೀಡಿದರೆ ಸಾಗುವಳಿ ಚೀಟಿ ನೀಡುವುದಾಗಿ ತಿಳಿಸಿದ್ದು, ಆಗ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಅಷ್ಟೊಂದು ಹಣ ಕೊಡಲು ಆಗುವುದಿಲ್ಲ ಎಂದು ಕೇಳಿ ಕೊಂಡಾಗ, ಅ.ಸ.ನೌರವರಾದ ನೀವು ಈಗ ಎಷ್ಟು ಹಣ ಇದೆ ಎಂದು ಕೇಳಿದ್ದು, ಆಗ ದೂರುದಾರರು ತನ್ನ ಬಳಿ 10,000/-

ರೂ.ಗಳ ಹಣ ಇದೆ ಎಂದು ತಿಳಿಸಿದಾಗ, ಅಷ್ಟು ಹಣವನ್ನು ಕೇಳಿ ಪಡೆದುಕೊಂಡಿರುತ್ತೀರಿ, ಉಳಿದ 25,000/- ರೂ.ಗಳ ಹಣ ನೀಡಿದಾಗ ಮಾತ್ರ ಸಾಗುವಳಿ ಚೀಟಿ ನೀಡುವುದಾಗಿ ತಿಳಿಸಿರುತ್ತೀರಿ. ತದನಂತರ ನಿಮ್ಮ ಬಳಿ ಸಹಾಯಕನಾಗಿರುವ ಪುಟ್ಟಲಿಂಗರವರು ದೂರುದಾರರನ್ನು ಭೇಟಿ ಮಾಡಿ ಉಳಿದ ರೂ. 25,000/-ಗಳ ಬಗ್ಗೆ ಕೇಳಿದ್ದು, ಆಗ ದೂರುದಾರರು ಅಷ್ಟು ಹಣ ಹೊಂದಿಸಲು ಕಷ್ಟವಾಗುತ್ತದೆ, ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ, ಅಂತಿಮವಾಗಿ ರೂ. 10,000/-ಗಳ ಲಂಚದ ಹಣವನ್ನು ಕೊಟ್ಟರೇನೆ ಸಾಗುವಳಿ ಚೀಟಿಯನ್ನು ರಾಜಸ್ವ ನಿರೀಕ್ಷಕರು ಅಂದರೆ ಅ.ಸ.ನೌರವರಾದ ನೀವು ಕೊಡುತ್ತೀರಿ ಎಂದು ದೂರುದಾರರಿಗೆ ತಿಳಿಸಿರುತ್ತಾರೆ.

ತದನಂತರ ದಿನಾಂಕ:07/03/2018 ರಂದು ಬೆಳಿಗ್ಗೆ 11-30 ಗಂಟೆಗೆ ದೂರುದಾರರು ಅ.ಸ.ನೌರವರಾದ ನಿಮಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಚಿಕ್ಕಬಳ್ಳಾಪುರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 01/2018 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

ಅದರಂತೆ ದಿನಾಂಕ: 12/03/2018ರಂದು ದೂರುದಾರರು ಅ.ಸನೌರವರಾದ ನಿಮ್ಮನ್ನು ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಿ ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ, ಅ.ಸ.ನೌರವರಾದ ನೀವು ಫಿರ್ಯಾದಿಯಿಂದ ಲಂಚದ ಹಣವನ್ನು ಕೇಳಿ, ಆ ಹಣವನ್ನು ನಿಮ್ಮ ಸಹಾಯಕನಾಗಿರುವ ಪುಟ್ಟಲಿಂಗಯ್ಯ ರವರ ಬಳಿ ಕೊಡುವಂತೆ ಸೂಚನೆ ಕೊಟ್ಟು ಆ ಸೂಚನೆಯನ್ವಯ ಪುಟ್ಟಲಿಂಗಯ್ಯ ರವರು ಫಿರ್ಯಾದಿಯಿಂದ ನೀವು ಕೇಳಿರುವ ಲಂಚದ ಹಣವನ್ನು ನಿಮ್ಮ ಕಚೇರಿಯಲ್ಲಿ ಪಡೆದುಕೊಂಡಿದ್ದು, ತರುವಾಯ ಮೇಲ್ಕಂಡ ಹಣವು ಪುಟ್ಟಲಿಂಗಯ್ಯ ರವರ ಸ್ವಾಧೀನದಲ್ಲಿದ್ದ ಬಗ್ಗೆ ನೀವು ಎಂದರೆ ಆಪಾದಿತ ಸರ್ಕಾರಿ ನೌಕರರು ತನಿಖಾ ಕಾಲದಲ್ಲಿ ತನಿಖಾಧಿಕಾರಿಯವರಾದ ಚಿಕ್ಕಬಳ್ಳಾಪುರ ಲೋಕಾಯುಕ್ತ ಆರಕ್ಷಕ ನಿರೀಕ್ಷಕರಿಗೆ ಯೋಗ್ಯ ಸಮಜಾಯಿಷಿಯನ್ನು ಕೊಡಲು ವಿಫಲರಾಗಿ ಕರ್ತವ್ಯಲೋಪವನ್ನೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

4. ವಿಚಾರಣಾಧಿಕಾರಿಯಾದ (ಅಪರ ನಿಬಂಧಕರು ವಿಚಾರಣೆಗಳು-11), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರು ಅನುಬಂಧ-1 ರಂತೆ ದೋಷಾರೋಪಣೆ ಮತ್ತು ಅನುಬಂಧ-2 ರಂತೆ ದೋಷಾರೋಪಣೆಯ ವಿವರಗಳು, ಅನುಬಂಧ-3 ರಂತೆ ಶಿಸ್ತು ಪ್ರಾಧಿಕಾರದ ಪರವಾಗಿ ವಿಚಾರಣೆ ಮಾಡಲು ಇಚ್ಚಿಸುವ ಸಾಕ್ಷಿದಾರರ ವಿವರಗಳು ಮತ್ತು ಅನುಬಂಧ-4 ರಂತೆ ಈ ವಿಚಾರಣೆಯಲ್ಲಿ ಹಾಜರುಪಡಿಸಲಿರುವ ದಾಖಲಾತಿಗಳ ವಿವರಗಳನ್ನೊಳಗೊಂಡಂತೆ ಸೂಚನಾ ಪತ್ರವನ್ನು ಆ.ಸ.ನೌಕರರಿಗೆ ಖುದ್ದು ಹಾಜರಾಗಬೇಕಾಗಿ ತಿಳಿಸುತ
ದೋಷಾರೋಪಣೆ ಪಟ್ಟಿ ಜಾರಿಯಾದ ಪ್ರತಿಕ್ರಿಯೆಯಾಗಿ,

31/03/2023 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದರು ಮತ್ತು ಆ.ಸ.ನೌಕರರ ಮೊದಲ ಮೌಖಿಕ ಹೇಳಿಕೆಯನ್ನು ಅದೇ ದಿನ ದಾಖಲಿಸಲಾಗಿದೆ. ಆ.ಸ.ನೌಕರರು ತಪ್ಪೊಪ್ಪಿಕೊಂಡಿಲ್ಲ ಮತ್ತು ಅದೇ ದಿನ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

5. ಆ.ಸ.ನೌಕರರು ಲಿಖಿತ ಹೇಳಿಕೆಯ ಜೊತೆಗೆ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಹೊರಡಿಸಿರುವ ಆದೇಶ ಸಂಖ್ಯೆ:ಇಎಸ್‌ಟಿ(1)/ಸಿಆರ್/168/2017-18, ದಿನಾಂಕ: 10/10/2019ನ್ನು ಹಾಜರುಪಡಿಸಿರುತ್ತಾರೆ. ಸದರಿ ಆದೇಶದಲ್ಲಿ ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರ ವಿರುದ್ಧದ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ನಡೆಸಲು ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಉಪ ತಹಶೀಲ್ದಾರ್, ನಾಡ ಕಛೇರಿ, ಗೊಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿರುವುದು ಕಂಡುಬರುತ್ತದೆ ಹಾಗೂ ಸದರಿ ದೋಷಾರೋಪಣಾ ಪಟ್ಟಿಯಲ್ಲಿರುವ ಆರೋಪಗಳು ಪ್ರಸ್ತುತ ಲೋಕಾಯುಕ್ತದಲ್ಲಿ ನಡೆಯುತ್ತಿರುವ ಆರೋಪಗಳು ಒಂದೇ ಆಗಿರುವುದು ಕಂಡುಬರುತ್ತದೆ.

6. ಶಿಸ್ತು ಪ್ರಾಧಿಕಾರದಿಂದ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ ನಂತರ ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ:ಕಂಇ 27 ಬಿಡಿಪಿ 2022, ಬೆಂಗಳೂರು, ದಿನಾಂಕ: 02/09/2022ರ ಪ್ರಕಾರ ಪ್ರಸ್ತುತ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ.

7. ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಗುಡಿಬಂಡೆ ರವರು ಈಗಾಗಲೇ ದಿನಾಂಕ: 28/12/2021 ರಂದು ಇಲಾಖಾ ವಿಚಾರಣೆಯನ್ನು ಪೂರ್ಣಗೊಳಿಸಿ, ಜಿಲ್ಲಾಧಿಕಾರಿಗಳು,

ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದು ತಿಳಿದುಬಂದಿರುತ್ತದೆ ಎಂದು ಅಭಿಪ್ರಾಯಿಸಿದ್ದಾರೆ.

8. ವಿಚಾರಣಾಧಿಕಾರಿಗಳು ಸಲ್ಲಿಸಿರುವ ವಿಚಾರಣಾ ವರದಿಯನ್ನು ಹಾಗೂ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಹೊರಡಿಸಿರುವ ಆದೇಶ ಸಂಖ್ಯೆ:ಇಎಸ್‌ಟಿ(1)/ ಸಿಆರ್/168/2017-18, ದಿನಾಂಕ: 10/10/2019ನ್ನು ಪರಿಶೀಲಿಸಲಾಗಿ, ಒಟ್ಟು ಸಂದರ್ಭಗಳ ಪರಿಗಣನೆಯ ಮೇಲೆ, ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರ ವಿರುದ್ಧ ಈಗಾಗಲೇ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಇಲಾಖಾ ವಿಚಾರಣೆಗಾಗಿ ಆದೇಶ ಹೊರಡಿಸಿದ್ದು, ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಉಪ ತಹಶೀಲ್ದಾರ್, ನಾಡ ಕಛೇರಿ, ಗೂಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು ಇವರನ್ನು ಮಂಡನಾಧಿಕಾರಿಯಾಗಿ ನೇಮಿಸಿರುತ್ತಾರೆ ಮತ್ತು ಶಿಸ್ತು ಪ್ರಾಧಿಕಾರದಿಂದ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ ನಂತರ ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ:ಕಂಇ 27 ಬಿಡಿಪಿ 2022, ಬೆಂಗಳೂರು, ದಿನಾಂಕ: 02/09/2022ರ ಪ್ರಕಾರ ಪ್ರಸ್ತುತ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಿರುವುದರಿಂದ ಹಾಗೂ ಈಗಾಗಲೇ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಗುಡಿಬಂಡೆ ರವರು ಈಗಾಗಲೇ ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ದಿನಾಂಕ: 28/12/2021 ರಂದು ಪೂರ್ಣಗೊಳಿಸಿ, ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ, ಆ.ಸ.ನೌಕರರ ವಿರುದ್ಧ ಅದೇ ರೀತಿಯ ಆರೋಪಗಳ ಆಧಾರದ ಮೇಲೆ ಈ ವಿಚಾರಣೆಯನ್ನು ಈ ಸಂಸ್ಥೆಯು ಮುಂದಾಗುವಂತಿಲ್ಲ.

ಆದ್ದರಿಂದ, ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ ರವರ ವಿರುದ್ಧದ ತ್ವರಿತ ಪ್ರಕ್ರಿಯೆಗಳು ಪರಿಗಣನೆಗೆ ಉಳಿಯುವುದಿಲ್ಲ.

> "ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ಇವರ ವಿರುದ್ಧ ಆರಂಭಿಸಿರುವ ವಿಚಾರಣೆಯನ್ನು ನಿಲ್ಲಿಸಬೇಕಾಗಿದೆ. ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಹೊರಡಿಸಿರುವ ಆದೇಶ ಸಂಖ್ಯೆ:ಇಎಸ್‌ಟಿ(1)/ಸಿಆರ್/168/2017-18, ದಿನಾಂಕ: 10/10/2019ರ ಪ್ರಕಾರ ಅದೇ ರೀತಿಯ ಆರೋಪಗಳನ್ನು ಈಗಾಗಲೇ ಪ್ರಾರಂಭಿಸಲಾಗಿದೆ ಮತ್ತು ಶಿಸ್ತು ಪ್ರಾಧಿಕಾರದಿಂದ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ ನಂತರ ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ:ಕಂಇ 27 ಬಿಡಿಪಿ 2022, ಬೆಂಗಳೂರು, ದಿನಾಂಕ: 02/09/2022ರ ಪ್ರಕಾರ ಪ್ರಸ್ತುತ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಿರುವುದರಿಂದ ಹಾಗೂ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಗುಡಿಬಂಡೆ ರವರು ಈಗಾಗಲೇ ಇಲಾಖಾ ವಿಚಾರಣೆಯನ್ನು ದಿನಾಂಕ: 28/12/2021 ರಂದು ಪೂರ್ಣಗೊಳಿಸಿ, ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ ಅದೇ ರೀತಿಯ ಆರೋಪಗಳ ಆಧಾರದ ಮೇಲೆ ಈ ವಿಚಾರಣೆಯನ್ನು ಈ ಸಂಸ್ಥೆಯು ಮುಂದಾಗುವಂತಿಲ್ಲ".

9. ಆದ್ದರಿಂದ, ತನಿಖಾ ವರದಿಯ ವರದಿಯನ್ನು ಸ್ವೀಕರಿಸಲು, ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರು ಇಲಾಖಾ ವಿಚಾರಣೆಗಾಗಿ ಆದೇಶ ಹೊರಡಿಸಿದ್ದು, ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ಉಪ ತಹಶೀಲ್ದಾರ್, ನಾಡ ಕಛೇರಿ, ಗೊಳೂರು ಹೋಬಳಿ, ಬಾಗೇಪಲ್ಲಿ ತಾಲ್ಲೂಕು ಇವರನ್ನು

ಮಂಡನಾಧಿಕಾರಿಯಾಗಿ ನೇಮಿಸಿ ಇದೇ ರೀತಿಯ ಆರೋಪಗಳ ಮೇಲೆ ಈಗಾಗಲೇ ವಿಚಾರಣೆಯನ್ನು ಆದೇಶ ಸಂಖ್ಯೆ:ಇಎಸ್‌ಟಿ(1)/ಸಿಆರ್/168/2017–18, ದಿನಾಂಕ: 10/10/2019 ರೀತ್ಯಾ ಆರಂಭಿಸಿರುವುದರಿಂದ ಮತ್ತು ಶಿಸ್ತು ಪ್ರಾಧಿಕಾರದಿಂದ ಇಲಾಖಾ ವಿಚಾರಣೆಯನ್ನು ಪ್ರಾರಂಭಿಸಿದ ನಂತರ ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ:ಕಂಇ 27 ಬಿಡಿಪಿ 2022, ಬೆಂಗಳೂರು, ದಿನಾಂಕ: 02/09/2022ರ ಪ್ರಕಾರ ಪ್ರಸ್ತುತ ವಿಚಾರಣೆಯನ್ನು ಈ ಪ್ರಾಧಿಕಾರಕ್ಕೆ ವಹಿಸಿರುವುದರಿಂದ ಮತ್ತು ಈಗಾಗಲೇ ತಹಶೀಲ್ದಾರ್, ಗುಡಿಬಂಡೆ ತಾಲ್ಲೂಕು, ಗುಡಿಬಂಡೆ ರವರು ಈಗಾಗಲೇ ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ದಿನಾಂಕ: 28/12/2021 ರಂದು ಪೂರ್ಣಗೊಳಿಸಿ, ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ ರವರಿಗೆ ಇಲಾಖಾ ವಿಚಾರಣಾ ವರದಿಯನ್ನು ಸಲ್ಲಿಸಿರುವುದರಿಂದ, ಅದೇ ರೀತಿಯ ಆರೋಪಗಳ ಆಧಾರದ ಮೇಲೆ ಈ ವಿಚಾರಣೆಯನ್ನು ಈ ಸಂಸ್ಥೆಯು ಪೂರ್ವಭಾವಿಯಾಗಿ ಮಾಡಲಾಗುವುದಿಲ್ಲ. ಆದ್ದರಿಂದ, ಆ.ಸ.ನೌಕರರಾದ ಶ್ರೀ ಎನ್.ಎಂ.ಕಿರಣ್ ಕುಮಾರ್ ಬಿನ್ ಎಂ.ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ ರವರ ವಿರುದ್ಧದ ವಿಚಾರಣೆಯನ್ನು ಮುಕ್ತಾಯಗೊಳಿಸಲು ಸರ್ಕಾರಕ್ಕೆ ಈ ಮೂಲಕ ಶಿಫಾರಸು ಮಾಡಲಾಗಿದೆ.

10. ಸದರಿ ವಿಷಯದಲ್ಲಿ ತೆಗೆದುಕೊಂಡ ಕ್ರಮವನ್ನು ಈ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದು.

ಸಂಬಂಧಪಟ್ಟ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿದೆ.

4/7/23

(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)
ಉಪಲೋಕಾಯುಕ್ತ–2,
ಕರ್ನಾಟಕ ರಾಜ್ಯ.

# KARNATAKA LOKAYUKTA

NO. UPLOK-2/DE/234/2022/ARE-11

M.S.Building,
Dr. B.R. Ambedkar Veedhi,
Bengaluru-560 001,
Date: 23/06/2023.

## :: R E P O R T::

Sub: Departmental Enquiry against Sri.N.M.Kiran Kumar S/o M.Muniyappa, Revenue Inspector, Hosuru Hobli, Gowribidanur Taluk, Chikkaballapur District. -reg.

Ref:

1. Report under section 12(3) of the KLA Act. 1984 in No.Compt/Uplok/BD/1353/2021/POARE-2, dated:14/12/2021.
2. Government Order No. ಕಂಇ 27 ಬಿಡಿಪಿ 2022 Bengaluru, dated 02/09/2022.
3. Nomination Order No. UPLOK-2/DE/234/2022 Bengaluru, dated 12/09/2022.

*****

1. The Departmental Enquiry is initiated against Sri.N.M.Kiran Kumar S/o M.Muniyappa, Revenue Inspector, Hosuru Hobli, Gowribidanur Taluk, Chikkaballapur District on the basis of the complaint dated 07/03/2018 filed by the complainant Sri.Shivappa S/o late Hanumappa, Kadaranahalli Village, Kurudi Panchayath, Hosuru Hobli, Gowribidanur Taluk, Chikkaballapur District. The allegations in the complaint is that, DGO while working as Revenue Inspector in Hosuru Hobli,

Gowribidanur Taluk at Chikkaballapur District in the year 2018, the brother of the complainant Anjanappa had not received Saguvali Chit though land bearing Sy.No.20 measuring 3 acres 5 guntas of Kadaranahalli Village was granted to him in the year 1996 by the Government and he was in possession of the same cultivating the land. So the complainant and his brother Anjanappa approached DGO for issuing Saguvali Chitty 4-5 times and the DGO has demanded bribe. That on 11/12/2017 in the afternoon the complainant and his brother Anjanappa met DGO in his office enquiring about the Saguvali Chit, then DGO has demanded bribe of Rs.35,000/- from the complainant and his brother. That when they told that they do not have that much of amount the DGO asked him how much they have got, so they told that they have got Rs.10,000/- and DGO has received Rs.10,000/- on that day and told them that Saguvali Chit will be given only after payment of balance of Rs.25,000/-. Later on the complainant met Puttalingaiah the Assistant of DGO and told him that they cannot pay that much amount for which Puttalingaiah told that only if they pay atleast Rs.10,000/- the DGO will give Saguvali Chit.

2. As the complainant was not willing to pay the amount, after contacting ACB Police, Chikkaballapura lodged complaint before Police Inspector, ACB Police Station, Chikkaballapura (hereinafter referred to as "Investigating Officer"). On the said complaint Investigating Officer registered case in Cr.No.01/2018 against the DGO for the offences punishable under section 7, 13(1)(d) r/w 13(2) of P.C.Act, 1988.

23/6

3. The Investigating Officer took up investigation and on 12/03/2018 at 2.15 p.m. Sri.Puttalingaiah was caught red handed while demanding and accepting illegal gratification of Rs.10,000/- from the complainant on behalf of DGO in the office of DGO and the said amount was seized under a mahazar after following post trap formalities by the Investigating Officer, ACB, Chikkaballapura. The DGO has failed to give satisfactory or convincing explanation for the said tainted amount found then, when questioned by the said I.O. After completion of investigation the investigating officer has filed charge sheet against the DGO in the concerned jurisdictional Court.

4. The Hon'ble Upalokayukta invoking power vested under section 7(2) of the Karnataka Lokayukta Act, 1984, took up investigation and on perusal of complaint, FIR, Mahazars, FSL report and other documents, found prima facie case and forwarded report dated 14/12/2021 U/s 12(3) of Karnataka Lokayukta Act, 1984 recommended the competent authority to initiate disciplinary proceedings against the DGO and to entrust the enquiry to the Hon'ble Upalokayukta, Karnataka under Rule 14-A of the KCS (CC& A) Rules 1957. The Competent Authority by order dated 02/09/2022 entrusted the matter to the Hon'ble Upalokayukta.

5. The Hon'ble Upalokayukta by order dated 12/09/2022, nominated Additional Registrar Enquiries-11 to conduct the enquiry.

23/6

6. The Articles of charge as framed by Additional Registrar Enquiries-11 is as follows:

**ANNEXURE-I**

**Charge:-**

ಆಪಾದಿತ ಸರ್ಕಾರಿ ನೌಕರರಾದ ಎನ್ ಎಂ ಕಿರಣಕುಮಾರ್ ಬಿನ್ ಎಂ. ಮುನಿಯಪ್ಪ, ಆದ ನೀವು 2018 ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲೂಕಿನ ಹೊಸೂರು ಹೋಬಳಿ ಯಲ್ಲಿ ರಾಜಸ್ವ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ದೂರುದಾರರ ಅಣ್ಣನಾದ ಅಂಜಿನಪ್ಪರವರ ಹೆಸರಿನಲ್ಲಿ ಕದರನಹಳ್ಳಿ ಗ್ರಾಮದ ಸರ್ವೆ ನಂ.20ರಲ್ಲಿ 3-05ಎಕರೆ ಜಮೀನು 1996ನೇ ಸಾಲಿನಲ್ಲಿ ಸರಕಾರದಿಂದ ಮಂಜೂರಾಗಿದ್ದು, ಅಂದಿನಿಂದ ಇದುವರೆವಿಗೂ ಸದರಿ ಜಮೀನಿನ ಅನುಭವದಲ್ಲಿರುವ ದೂರುದಾರರ ಅಣ್ಣನ ಹೆಸರಿಗೆ ಸಾಗುವಳಿ ಚೀಟಿ ನೀಡದಿರುವುದರಿಂದ, ಸಾಗುವಳಿ ಚೀಟಿಗಾಗಿ 4-5 ಬಾರಿ ದೂರುದಾರರು ಮತ್ತು ಅವರ ಅಣ್ಣನವರು ಆಪಾದಿತ ಸರ್ಕಾರಿ ನೌಕರರಾದ ನಿಮ್ಮನ್ನು ಭೇಟಿ ಮಾಡಿ ವಿಚಾರಿಸಲಾಗಿ, ಲಂಚದ ಹಣ ನೀಡಿದರೆ ಮಾತ್ರ ದೂರುದಾರರ ಕೆಲಸ ಮಾಡಿಕೊಡುತ್ತೇನೆಂದು ತಿಳಿರುತ್ತೀರಿ. ನಂತರ ದಿನಾಂಕ: 11/12/2017ರಂದು ಮಧ್ಯಾಹ್ನ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಸಾಗುವಳಿ ಚೀಟಿ ಬಗ್ಗೆ ಅ.ಸ.ನೌರವರಾದ ನಿಮ್ಮನ್ನು ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಿ ವಿಚಾರಿಸಿದಾಗ, ನೀವು 35,000/- ರೂ.ಗಳ ಲಂಚದ ಹಣ ನೀಡಿದರೆ ಸಾಗುವಳಿ ಚೀಟಿ ನೀಡುವುದಾಗಿ ತಿಳಿಸಿದ್ದು, ಆಗ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಅಷ್ಟೊಂದು ಹಣ ಕೊಡಲು ಆಗುವುದಿಲ್ಲ ಎಂದು ಕೇಳಿ ಕೊಂಡಾಗ, ಅ.ಸ.ನೌರವರಾದ ನೀವು ಈಗ ಎಷ್ಟು ಹಣ ಇದೆ ಎಂದು ಕೇಳಿದ್ದು, ಆಗ ದೂರುದಾರರು ತನ್ನ ಬಳಿ 10,000/- ರೂ.ಗಳ ಹಣ ಇದೆ ಎಂದು ತಿಳಿಸಿದಾಗ, ಅಷ್ಟು ಹಣವನ್ನು ಕೇಳಿ ಪಡೆದುಕೊಂಡಿರುತ್ತೀರಿ, ಉಳಿದ 25,000/- ರೂ.ಗಳ ಹಣ ನೀಡಿದಾಗ ಮಾತ್ರ ಸಾಗುವಳಿ ಚೀಟಿ ನೀಡುವುದಾಗಿ ತಿಳಿಸಿರುತ್ತೀರಿ. ತದನಂತರ ನಿಮ್ಮ ಬಳಿ ಸಹಾಯಕನಾಗಿರುವ ಪುಟ್ಟಲಿಂಗರವರು ದೂರುದಾರರನ್ನು ಭೇಟಿ ಮಾಡಿ ಉಳಿದ ರೂ. 25,000/-ಗಳ ಬಗ್ಗೆ ಕೇಳಿದ್ದು, ಆಗ ದೂರುದಾರರು ಅಷ್ಟು ಹಣ ಹೊಂದಿಸಲು ಕಷ್ಟವಾಗುತ್ತದೆ, ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ, ಅಂತಿಮವಾಗಿ ರೂ.

23/6

10,000/–ಗಳ ಲಂಚದ ಹಣವನ್ನು ಕೊಟ್ಟರೇನೆ ಸಾಗುವಳಿ ಚೀಟಿಯನ್ನು ರಾಜಸ್ವ ನಿರೀಕ್ಷಕರು ಅಂದರೆ ಅ.ಸ.ನೌರವರಾದ ನೀವು ಕೊಡುತ್ತೀರಿ ಎಂದು ದೂರುದಾರರಿಗೆ ತಿಳಿಸಿರುತ್ತಾರೆ.

ತದನಂತರ ದಿನಾಂಕ:07/03/2018 ರಂದು ಬೆಳಿಗ್ಗೆ 11–30 ಗಂಟೆಗೆ ದೂರುದಾರರು ಅ.ಸ.ನೌರವರಾದ ನಿಮಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಚಿಕ್ಕಬಳ್ಳಾಪುರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 01/2018 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

ಅದರಂತೆ ದಿನಾಂಕ: 12/03/2018ರಂದು ದೂರುದಾರರು ಅ.ಸನೌರವರಾದ ನಿಮ್ಮನ್ನು ನಿಮ್ಮ ಕಚೇರಿಯಲ್ಲಿ ಭೇಟಿ ಮಾಡಿ ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ, ಅ.ಸ.ನೌರವರಾದ ನೀವು ಫಿರ್ಯಾದಿಯಿಂದ ಲಂಚದ ಹಣವನ್ನು ಕೇಳಿ, ಆ ಹಣವನ್ನು ನಿಮ್ಮ ಸಹಾಯಕನಾಗಿರುವ ಪುಟ್ಟಲಿಂಗಯ್ಯ ರವರ ಬಳಿ ಕೊಡುವಂತೆ ಸೂಚನೆ ಕೊಟ್ಟು ಆ ಸೂಚನೆಯನ್ವಯ ಪುಟ್ಟಲಿಂಗಯ್ಯ ರವರು ಫಿರ್ಯಾದಿಯಿಂದ ನೀವು ಕೇಳಿರುವ ಲಂಚದ ಹಣವನ್ನು ನಿಮ್ಮ ಕಚೇರಿಯಲ್ಲಿ ಪಡೆದುಕೊಂಡಿದ್ದು, ತರುವಾಯ ಮೇಲ್ಕಂಡ ಹಣವು ಪುಟ್ಟಲಿಂಗಯ್ಯ ರವರ ಸ್ವಾಧೀನದಲ್ಲಿದ್ದ ಬಗ್ಗೆ ನೀವು ಎಂದರೆ ಆಪಾದಿತ ಸರ್ಕಾರಿ ನೌಕರರು ತನಿಖಾ ಕಾಲದಲ್ಲಿ ತನಿಖಾಧಿಕಾರಿಯವರಾದ ಚಿಕ್ಕಬಳ್ಳಾಪುರ ಲೋಕಾಯುಕ್ತ ಆರಕ್ಷಕ ನಿರೀಕ್ಷಕರಿಗೆ ಯೋಗ್ಯ ಸಮಜಾಯಿಷಿಯನ್ನು ಕೊಡಲು ವಿಫಲರಾಗಿ ಕರ್ತವ್ಯಲೋಪವನ್ನೆಸಗಿ ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ನಡತೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ನಡತೆ) 1966 ನಿಯಮ 3(1)(ii) ಮತ್ತು (iii) ರಡಿಯಲ್ಲಿ ದುರ್ನಡತೆಯನ್ನೆಸಗಿರುತ್ತೀರಿ.

7. The statement of imputations of misconduct as framed by Additional Registrar Enquiries-11 is as follows:

23/6

**ANNEXURE-II**

**STATEMENT OF IMPUTATION OF MISCONDUCT:**

ಮಾನ್ಯ ಪೋಲಿಸ್ ಅಧೀಕ್ಷಕರು ಭ್ರಷ್ಟಾಚಾರ ನಿಗ್ರಹ ದಳ, ಕೇಂದ್ರ ವಲಯ, ಬೆಂಗಳೂರು, ಇವರು ಪೋಲಿಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಬಳ್ಳಾಪುರ, (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ), ಇವರ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಶ್ರೀ. **ಎನ್. ಎಮ್. ಕಿರಣ್ ಕುಮಾರ್, ಬಿನ್ ಎಂ. ಮುನಿಯಪ್ಪ, ರಾಜಸ್ವ ನಿರೀಕ್ಷಕರು, ಹೊಸೂರು ಹೋಬಳಿ, ಗೌರಿಬಿದನೂರು ತಾಲೂಕು: ಚಿಕ್ಕಬಳ್ಳಾಪುರ ಜಿಲ್ಲೆ,** (ಇನ್ನು ಮುಂದೆ ಆಪಾದಿತ ಸರ್ಕಾರಿ ನೌಕರರು, ಸಂಕ್ಷಿಪ್ತವಾಗಿ ಅ.ಸ.ನೌ ಎಂದು ಕರೆಯಲ್ಪಡುತ್ತಾರ), ಆದ ನೀವು ಶ್ರೀ. **ಶಿವಪ್ಪ, ಬಿನ್ ಲೇಟ್ ಹನುಮಪ್ಪ, ಕದರನಹಳ್ಳಿ ಗ್ರಾಮ, ಕುರುಡಿ ಪಂಚಾಯ್ತಿ, ಹೊಸೂರು ಹೋಬಳಿ, ಗೌರಿಬಿದನೂರು ತಾಲ್ಲೂಕು: ಚಿಕ್ಕಬಳ್ಳಾಪುರ ಜಿಲ್ಲೆ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ), ರವರಿಂದ ಸರ್ಕಾರಿ ಕೆಲಸಕ್ಕೆ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 7(2)ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ತನಿಖೆ ತೆಗೆದುಕೊಂಡಿರುತ್ತಾರೆ. ಚಿಕ್ಕಬಳ್ಳಾಪುರ, ಎ.ಸಿ.ಬಿ ಪೋಲಿಸ್ ಠಾಣೆ, ಮೊಕದ್ದಮೆ ಸಂ:01/2018 ರಲ್ಲಿಯ ದಾಖಲೆಗಳನ್ನು ಮತ್ತು ವಿವರಗಳನ್ನು ಪರಿಗಣಿಸಲಾಗಿ ಈ ಕೆಳಗೆ ಹೇಳಿದ ಸಂಗತಿಗಳು ಮೇಲ್ನೋಟಕ್ಕೆ ಕಂಡು ಬರುತ್ತದೆ.

i. ದೂರುದಾರರ ಅಣ್ಣನಾದ ಅಂಜಿನಪ್ಪರವರ ಹೆಸರಿನಲ್ಲಿ ಕದರನಹಳ್ಳಿ ಗ್ರಾಮದ ಸರ್ವೆ ನಂ.20ರಲ್ಲಿ 3-05ಎಕರೆ ಜಮೀನು 1996ನೇ ಸಾಲಿನಲ್ಲಿ ಸರಕಾರದಿಂದ ಮಂಜೂರಾಗಿದ್ದು, ಅಂದಿನಿಂದ ದೂರುದಾರರ ಅಣ್ಣನೇ ಅನುಭವದಲ್ಲಿರುತ್ತಾರೆ. ಆದರೆ ಇದುವರೆವಿಗೂ ಸಾಗುವಳಿ ಚೀಟಿ ನೀಡಿರುವುದಿಲ್ಲ. ಸಾಗುವಳಿ ಚೀಟಿಗಾಗಿ 4-5 ಬಾರಿ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಅ.ಸ.ನೌ ರವರನ್ನು ಭೇಟಿ ಮಾಡಿ ವಿಚಾರಿಸಲಾಗಿ, ಲಂಚದ ಹಣ ನೀಡಿದರೆ ಮಾತ್ರ ದೂರುದಾರರ ಕೆಲಸ ಮಾಡಿಕೊಡುತ್ತೇನೆಂದು ಹೇಳಿರುತ್ತಾರೆ. ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರ ಹತ್ತಿರ ಹಣ ಇಲ್ಲದಿದ್ದರಿಂದ, ದಿನಾಂಕ:

23/6

04/12/2017ರಂದು ಅವರುಗಳ ಮನೆಯಲ್ಲಿದ್ದ ಬಂಗಾರದ ಆಭರಣಗಳನ್ನು ಅಡವಿಟ್ಟು ಹಣವನ್ನು ಹೊಂದಿಸಿರುತ್ತಾರೆ. ನಂತರ ದಿನಾಂಕ: 11/12/2017ರಂದು ಮಧ್ಯಾಹ್ನ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಸಾಗುವಳಿ ಚೀಟಿ ಬಗ್ಗೆ ಅ.ಸ.ನೌ ರವರ ಕಚೇರಿಯಲ್ಲಿ ಅ.ಸ.ನೌ ರವರನ್ನು ಭೇಟಿ ಮಾಡಿ ವಿಚಾರಿಸಿದಾಗ, ಅ.ಸ.ನೌ ರವರು 35,000/- ರೂ.ಗಳ ಲಂಚದ ಹಣ ನೀಡಿದರೆ ಸಾಗುವಳಿ ಚೀಟಿ ನೀಡುವುದಾಗಿ ತಿಳಿಸಿದ್ದು, ಆಗ ದೂರುದಾರರು ಮತ್ತು ಅವರ ಅಣ್ಣ ಅಂಜಿನಪ್ಪನವರು ಅಷ್ಟೊಂದು ಹಣ ಕೊಡಲು ಆಗುವುದಿಲ್ಲ ಎಂದು ಕೇಳಿ ಕೊಂಡಾಗ, ಅ.ಸ.ನೌ ರವರು ಈಗ ಎಷ್ಟು ಹಣ ಇದೆ ಎಂದು ಕೇಳಿದ್ದು, ಆಗ ದೂರುದಾರರು ತನ್ನ ಬಳಿ 10,000/- ರೂ.ಗಳ ಹಣ ಇದೆ ಎಂದು ತಿಳಿಸಿದಾಗ, ಅಷ್ಟು ಹಣವನ್ನು ಕೇಳಿ ಪಡೆದುಕೊಂಡಿರುತ್ತಾರೆ. ಉಳಿದ 25,000/- ರೂ.ಗಳ ಹಣ ನೀಡಿದಾಗ ಮಾತ್ರ ಸಾಗುವಳಿ ಚೀಟಿ ನೀಡುವುದಾಗಿ ತಿಳಿಸಿರುತ್ತಾರೆ. ಇದಾದ ನಂತರ ಎದುರುದಾರರ ಬಳಿ ಸಹಾಯಕನಾಗಿರುವ ಪುಟ್ಟಲಿಂಗರವರು ದೂರುದಾರರನ್ನು ಭೇಟಿ ಮಾಡಿ ಉಳಿದ ರೂ. 25,000/-ಗಳ ಬಗ್ಗೆ ಕೇಳಿದ್ದು, ಆಗ ದೂರುದಾರರು ಅಷ್ಟು ಹಣ ಹೊಂದಿಸಲು ಕಷ್ಟವಾಗುತ್ತದೆ, ಸ್ವಲ್ಪ ಕಡಿಮೆ ಮಾಡಿಕೊಳ್ಳಿ ಎಂದು ಕೇಳಿದಾಗ, ಅಂತಿಮವಾಗಿ ರೂ. 10,000/-ಗಳ ಲಂಚದ ಹಣವನ್ನು ಕೊಟ್ಟರೇನೆ ಸಾಗುವಳಿ ಚೀಟಿಯನ್ನು ರಾಜಸ್ವ ನಿರೀಕ್ಷಕರು ಕೊಡುತ್ತಾರೆ ಎಂದು ತಿಳಿಸಿರುತ್ತಾರೆ.

ii. ನಂತರ ದಿನಾಂಕ:03/03/2018ರಂದು ಮಧ್ಯಾಹ್ನ 2.30ಗಂಟೆಗೆ ದೂರುದಾರರು ಎದುರುದಾರರನ್ನು ಅವರ ಕಚೇರಿಯ ಹಿಂಭಾಗದಲ್ಲಿರುವ ಕೊಠಡಿಯಲ್ಲಿ ಭೇಟಿ ಮಾಡಿ ಸಾಗುವಳಿ ಚೀಟಿ ಬಗ್ಗೆ ವಿಚಾರಿಸಿದಾಗ, ಅ.ಸ.ನೌ ರವರ ಪುಟ್ಟಲಿಂಗ ಹೇಳಿರುವಂತೆ ಉಳಿದ 10,000/- ರೂ.ಗಳನ್ನು ನೀಡಿದರೆ ಸಾಗುವಳಿ ಚೀಟಿ ವಿತರಣೆ ಮಾಡುವುದಾಗಿ ತಿಳಿಸಿರುತ್ತಾರೆ. ಅ.ಸ.ನೌ ರವರು ದೂರುದಾರರೊಂದಿಗೆ ಲಂಚದ ಹಣಕ್ಕೆ ಒತ್ತಾಯಿಸಿ ಮಾತನಾಡಿದ್ದನ್ನು ದೂರುದಾರರು ಮೊಬೈಲ್‌ನಲ್ಲಿ ಧ್ವನಿ ಮುದ್ರಿಸಿಕೊಂಡಿರುತ್ತಾರೆ ಹಾಗೂ ಅ.ಸ.ನೌ ರವರು ಹಣ ಬೇಡಿರುವುದು ಸ್ಪಷ್ಟವಾಗಿ ಧ್ವನಿ ಮುದ್ರಣವಾಗಿರುತ್ತದೆ.

23/6

iii. ದಿನಾಂಕ:07/03/2018 ರಂದು ಬೆಳಿಗ್ಗೆ 11-30 ಗಂಟೆಗೆ ದೂರುದಾರರು ಅ.ಸ.ನೌ ರವರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದೆ ಇದ್ದುದರಿಂದ ತನಿಖಾಧಿಕಾರಿಗಳನ್ನು ಭೇಟಿಮಾಡಿ ದೂರು ನೀಡಿದ್ದು, ಅದರ ಆಧಾರದ ಮೇಲೆ ಚಿಕ್ಕಬಳ್ಳಾಪುರ ಎಸಿಬಿ ಪೋಲಿಸ್ ಠಾಣೆ ಮೊ. ಸಂ. 01/2018 ರಲ್ಲಿ ಕಲಂ 7 (ಎ) ಭ್ರಷ್ಟಾಚಾರ ನಿಗ್ರಹ ಕಾಯ್ದೆ (ತಿದ್ದುಪಡಿ) 1988ರ ಅಡಿ ಪ್ರಕರಣ ದಾಖಲಿಸಿರುತ್ತಾರೆ.

iv. ಪ್ರಕರಣ ದಾಖಲಾದ ನಂತರ ತನಿಖಾಧಿಕಾರಿಗಳು ಸರ್ಕಾರಿ ಪಂಚರುಗಳಾದ 1) ಶ್ರೀ ಮಂಜುನಾಥ್ ಎನ್. (ನೆರಳು ಸಾಕ್ಷಿ) 2) ಶ್ರೀ ಚಕ್ರಪಾಣಿ ನಾಗೇಶ್ ಹೆಚ್.,ಇವರುಗಳನ್ನು ಬರಮಾಡಿಕೊಂಡಿದ್ದು, ಸದರಿಯವರ ಸಮಕ್ಷಮ ದೂರುದಾರರು ತಮ್ಮ ಮೊಬೈಲ್‌ನ್ನು ಹಾಜರು ಪಡಿಸಿದ್ದು, ಮೊಬೈಲ್‌ನಲ್ಲಿದ್ದ ಧ್ವನಿ ಮುದ್ರಣವನ್ನು ಪ್ಲೇ ಮಾಡಿ, ಸದರಿ ಧ್ವನಿ ಮುದ್ರಣಗಳನ್ನು ಡೇಟಾ ಕೇಬಲ್ ಮೂಲಕ ಕಂಪ್ಯೂಟರ್‌ಗೆ ಹಾಕಿ ಸಿಡಿಗೆ ವರ್ಗಾಯಿಸಿಕೊಂಡಿರುತ್ತಾರೆ. ಸದರಿ ಸಂಭಾಷಣೆಯನ್ನು ಪಂಚರಿಗೆ ಕೇಳಿಸಲಾಗಿ, ಎದುರುದಾರರು ಲಂಚಕ್ಕಾಗಿ ಬೇಡಿಕೆ ಇಟ್ಟಿರುವುದು ಕಂಡು ಬರುತ್ತದೆ. ಲಂಚ ನೀಡಲು ತಂದ (ರೂ.2,000/- ಮುಖಬೆಲೆಯ 4-ನೋಟುಗಳು ಮತ್ತು ರೂ.500/- ಮುಖಬೆಲೆಯ 4-ನೋಟುಗಳು) ಒಟ್ಟು 10,000/- ರೂ.ಗಳನ್ನು ದೂರುದಾರರು ತನಿಖಾಧಿಕಾರಿಗಳ ಮುಂದೆ ಹಾಜರು ಪಡಿಸಿದ್ದು, ಸದರಿ ನೋಟುಗಳ ನಂ.ಗಳನ್ನು ಪಂಚರು ಹಾಳೆಯಲ್ಲಿ ಬರೆದುಕೊಂಡಿರುತ್ತಾರೆ. ಪೋಲೀಸ್ ಸಿಬ್ಬಂದಿ ಸದರಿ ನೋಟುಗಳಿಗೆ ಫಿನಾಫ್ತಲೀನ್ ಪೌಡರನ್ನು ಸವರಿ, ಸದರಿ ಹಣವನ್ನು ಪಂಚ ಸಾಕ್ಷಿ ಮಂಜುನಾಥ್‌ರವರ ಮೂಲಕ ದೂರುದಾರರ ಪ್ಯಾಂಟಿನ ಬಲ ಜೇಬಿನಲ್ಲಿ ಇಡಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಮಂಜುನಾಥ್‌ರವರ ಎರಡೂ ಕೈಗಳನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಪ್ರತ್ಯೇಕವಾಗಿ ತೊಳೆಸಲಾಗಿ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿದ್ದು, ಫಿನಾಫ್ತಲೀನ್ ಪೌಡರನ ವೈಶಿಷ್ಟತೆಯನ್ನು ದೂರುದಾರರು ಹಾಗೂ ಪಂಚರಿಗೆ ಮನವರಿಕೆ ಮಾಡಿಕೊಟ್ಟಿರುತ್ತಾರೆ. ನೆರಳು ಸಾಕ್ಷಿಯಾದ ಮಂಜುನಾಥ್‌ರವರಿಗೆ ದೂರುದಾರರೊಂದಿಗೆ ಲಂಚವನ್ನು ನೀಡುವ ಕಾಲಕ್ಕೆ ನಡೆಯುವ ಸಂಭಾಷಣೆ ಹಾಗೂ ವಿದ್ಯಾಮಾನಗಳನ್ನು ಗಮನಿಸಬೇಕೆಂದು ಸೂಚನೆ ನೀಡಿರುತ್ತಾರೆ.

23/6

ದೂರುದಾರರಿಗೆ ಹಣವನ್ನು ಅನಗತ್ಯವಾಗಿ ಮುಟ್ಟದಂತೆ, ಬೇರೆ ಯಾವುದಕ್ಕೂ ಬಳಸದಂತೆ ತಿಳಿಸಿ, ಎದುರುದಾರರು ಲಂಚದ ಹಣವನ್ನು ಕೇಳಿದಾಗ ಮಾತ್ರ ಕೊಡುವಂತೆ ಮತ್ತು ಲಂಚದ ಹಣವನ್ನು ಸ್ವೀಕರಿಸಿದ ನಂತರ ಹೊರಗಡೆ ಬಂದು ಬಲಗೈನಿಂದ ತಲೆಯನ್ನು ಸವರಿಕೊಳುವ ಮೂಲಕ ಸನ್ನೆ ನೀಡಬೇಕೆಂದು ತಿಳಿಸಿರುತ್ತಾರೆ. ಆ ಕಾಲಕ್ಕೆ ನಡೆಯುವ ಸಂಭಾಷಣೆಯನ್ನು ದೂರುದಾರರಿಗೆ ವಾಯ್ಸ್ ರೆಕಾರ್ಡ್‌ನ್ನು ನೀಡಿ, ಎದುರುದಾರರ ಹಾಗೂ ದೂರುದಾರರ ಮಧ್ಯೆ ನಡೆಯುವ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ತನಿಖಾಧಿಕಾರಿಗಳು ತಿಳಿಸಿರುತ್ತಾರೆ. ಈ ಎಲ್ಲಾ ಘಟನಾವಳಿಗಳನ್ನು ವಿವಿಧ ಹಂತಗಳಲ್ಲಿ ಫೋಟೋಗಳನ್ನು ತೆಗೆಯಿಸಿ ದಿನಾಂಕ.07.03.2018ರಂದು ಮಧ್ಯಾಹ್ನ 01–00 ಗಂಟೆಯಿಂದ 2–00 ಗಂಟೆಯವರಿಗೆ ಚಿಕ್ಕಬಳ್ಳಾಪುರ ಎಸಿಬಿ ಕಚೇರಿಯಲ್ಲಿ ಲ್ಯಾಪ್‌ಟಾಪ್ ಮೂಲಕ ಗಣಕೀಕರಣ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ದಾಖಲಿಸಿರುತ್ತಾರೆ.

v. ದಿನಾಂಕ: 07/03/2018ರಂದು ಮತ್ತು 08/03/2018ರಂದು ದೂರುದಾರರು ಅ.ಸ.ನೌ ರವರನ್ನು ಹಣ ನೀಡಲು ಸಂಪರ್ಕಿಸಿದಾಗ ಅ.ಸ.ನೌ ರವರು ಪುಟ್ಟಲಿಂಗನ ಕೈಲಿ ಕೊಡಲು ತಿಳಿಸಿದ್ದು, ಆದರೆ ಸದರಿ ಎರಡೂ ದಿನಗಳಂದು ಪುಟ್ಟಲಿಂಗ ಸಿಗದಿದ್ದರಿಂದ, ತನಿಖಾಧಿಕಾರಿಗಳು ಟ್ರಾಪ್ ಕಾರ್ಯಾಚರಣೆಯನ್ನು ಮುಂದೂಡಿರುತ್ತಾರೆ. ದಿನಾಂಕ: 12/03/2018ರಂದು ಮಧ್ಯಾಹ್ನ 02–15 ಗಂಟೆಗೆ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಪಂಚರೊಂದಿಗೆ ಅ.ಸ.ನೌ ರವರ ಕಚೇರಿ ಬಳಿ ಬಂದು ದೂರುದಾರರು ಹಾಗೂ ನೆರಳು ಸಾಕ್ಷಿ ಮಂಜುನಾಥ್‌ರವರಿಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನೀಡಿದ ಸೂಚನೆಯನ್ನು ಮತ್ತೊಮ್ಮೆ ನೆನಪಿಸಿ ಅ.ಸ.ನೌ ರವರನ್ನು ಭೇಟಿಮಾಡಲು ಕಳುಹಿಸಿ ಕೊಟ್ಟಿರುತ್ತಾರೆ. ದೂರುದಾರರು, ನೆರಳು ಸಾಕ್ಷಿರವರೊಂದಿಗೆ ಬಂದು, ಅ.ಸ.ನೌ ರವರನ್ನು ಎದುರುದಾರರ ಕಚೇರಿಯಲ್ಲಿ ಭೇಟಿಮಾಡಿ ಲಂಚದ ಹಣವನ್ನು ಅ.ಸ.ನೌ ರವರಿಗೆ ನೀಡಲು ಹೋದಾಗ, ಅ.ಸ.ನೌ ರವರು ಸದರಿ ಲಂಚದ ಹಣವನ್ನು ಕಚೇರಿಯಲ್ಲಿದ್ದ ಪುಟ್ಟಲಿಂಗರವರಿಗೆ ನೀಡುವಂತೆ ತಿಳಿಸಿದ್ದು, ದೂರುದಾರರು ಫಿನಾಫ್ತೀಲಿನ್ ಲೇಪಿತ ರೂ.10,000/– ಲಂಚದ ಹಣವನ್ನು ಪುಟ್ಟಲಿಂಗರವರಿಗೆ ನೀಡಿದ್ದು, ಸದರಿಯವರು ತಮ್ಮ ಬಲಗೈಯಿಂದ ಹಣವನ್ನು ಸ್ವೀಕರಿಸಿ ಎಡಗೈ ಸಹಾಯದಿಂದ ತಮ್ಮ ಷರ್ಟಿನ

23/6

ಎಡಭಾಗದ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ಆಗ ಕೂಡಲೇ ನೆರಳು ಸಾಕ್ಷಿದಾರರು ತನಿಖಾಧಿಕಾರಿಗಳಿಗೆ ತನ್ನ ತಲೆಯನ್ನು ಬಲಗೈಯಿಂದ ಸವರಿಕೊಳ್ಳುವ ಮೂಲಕ ತನಿಖಾಧಿಕಾರಿಗಳಿಗೆ ಸನ್ನೆ ಮಾಡಿರುತ್ತಾರೆ.

vi. ಆ ಸಂದರ್ಭದಲ್ಲಿ ನೆರಳು ಸಾಕ್ಷಿರವರು ಸನ್ನೆ ಮಾಡಿದ ತಕ್ಷಣ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿ ಮತ್ತು ಮತ್ತೊಬ್ಬ ಪಂಚರೊಂದಿಗೆ ಸದರಿ ಎದುರುದಾರರು ಇದ್ದ ಸ್ಥಳಕ್ಕೆ ಬಂದು, ತಮ್ಮ ಗುರುತಿನ ಚೀಟಿ ಅ.ಸ.ನೌ ರವರಿಗೆ ತೋರಿಸಿ ಮತ್ತು ಎದುರುದಾರರ ಪರವಾಗಿ ಲಂಚದ ಹಣ ಸ್ವೀಕರಿಸಿದ ಮುಟ್ಟಲಿಂಗ (ಖಾಸಗಿ ವ್ಯಕ್ತಿ)ರವರಿಗೆ ತೋರಿಸಿ, ತಮ್ಮ ಪರಿಚಯ ಹೇಳಿ ಮತ್ತು ಅ.ಸ.ನೌ ರವರ ಮತ್ತು ಮುಟ್ಟಲಿಂಗರವರ ಪರಿಚಯ ಕೇಳಿ, ಅವರ ಮೇಲೆ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಅಡಿಯಲ್ಲಿ ದೂರು ದಾಖಲಾಗಿರುವ ವಿಚಾರ ತಿಳಿಸಿ, ತನಿಖೆಗೆ ಸಹಕರಿಸುವಂತೆ ತಿಳಿಸಿದ್ದು ಇರುತ್ತದೆ. ತನಿಖಾಧಿಕಾರಿಗಳು ಮುಟ್ಟಲಿಂಗರವರ ಎರಡೂ ಕೈಗಳನ್ನು ಪ್ರತ್ಯೇಕ ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಪಂಚ ಸಾಕ್ಷಿ ಮಂಜುನಾಥ್‌ರವರಿಗೆ ಸೂಚನೆ ನೀಡಿ ಮುಟ್ಟಲಿಂಗರವರು ಧರಿಸಿದ್ದ ಷರ್ಟಿನ ಎಡಭಾಗದ ಜೇಬಿನಲ್ಲಿದ್ದ ಲಂಚದ ಹಣವನ್ನು ತೆಗೆಸಿದ್ದು, ಅವುಗಳನ್ನು ಪಂಚರು ಪರಿಶೀಲಿಸಲಾಗಿ, ಸದರಿ ನೋಟುಗಳು ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ನಮೂದಿಸಿದ ನೋಟುಗಳ ನಂಬರುಗಳಿಗೆ ಹಾಗೂ ಮೌಲ್ಯಕ್ಕೆ ಹೋಲಿಕೆಯಾಗಿರುತ್ತವೆ. ನಂತರ ತನಿಖಾಧಿಕಾರಿಗಳು ಮುಟ್ಟಲಿಂಗಪ್ಪರವರ ಶರ್ಟನ್ನು ಬಿಚ್ಚಿಸಿ, ಲಂಚದ ಹಣ ಇಟ್ಟುಕೊಂಡಿದ್ದ ಜೇಬನ್ನು ಸೋಡಿಯಮ್ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿ ತೆಗೆದಾಗ, ದ್ರಾವಣವು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ. ನಂತರ ತನಿಖಾಧಿಕಾರಿಗಳು ಸದರಿ ಶರ್ಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಗಳು ಅ.ಸ.ನೌ ರವರ ಅಂಗ ಶೋಧನೆ ಮಾಡಿಸಲಾಗಿ, ಅವರ ಬಳಿ 2,00,000/– ರೂ. ಹಣ ದೊರೆತಿದ್ದು, ಆ ಬಗ್ಗೆ ಸಮಂಜಸ ಉತ್ತರ ನೀಡದ ಕಾರಣ ಸದರಿ ಹಣವನ್ನು ಒಂದು ಕವರ್‌ನಲ್ಲಿ ಹಾಕಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ಟ್ರ್ಯಾಪ್ ಪ್ರಕ್ರಿಯೆಗಳನ್ನು ಅ.ಸ.ನೌರವರ ಕೊಠಡಿಯಲ್ಲಿ ಪೂರೈಸಿದ ನಂತರ ಲ್ಯಾಪ್‌ಟಾಪ್‌ನಲ್ಲಿ ಪಂಚನಾಮೆಯನ್ನು ನಿರ್ವಹಿಸಲು ಕೊಠಡಿ

23/6

ಕಿರಿದಾಗಿರುವುದರಿಂದ ಕೊಠಡಿಗೆ ಹೊಂದಿಕೊಂಡಂತಿರುವ ನಾಡಕಚೇರಿಯಲ್ಲಿ ಮುಂದಿನ ನಡವಳಿಗಳನ್ನು ನಿರ್ವಹಿಸಿರುತ್ತಾರೆ.

vii. ನಂತರ ತನಿಖಾಧಿಕಾರಿಗಳು ದೂರುದಾರರಿಂದ ವಾಯ್ಸ್ ರೆಕಾರ್ಡ್‌ನ್ನು ಪಡೆದು ಅದನ್ನು ಲ್ಯಾಪ್‌ಟಾಪ್‌ಗೆ ಹಾಕಿ ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಯನ್ನು ಎದುರುದಾರರ ಮೇಲಾಧಿಕಾರಿಗಳಾದ ಹೊಸೂರು ನಾಡಕಚೇರಿಯ ಉಪತಹಶೀಲ್ದಾರ್‌ರಾದ ಶ್ರೀಮತಿ ಅಕ್ಕಮಹಾದೇವಿರವರಿಗೆ ಕೇಳಿಸಿದಾಗ, ಅವರು ಅದರಲ್ಲಿ ಅ.ಸ.ನೌ ರವರ ಸಂಭಾಷಣೆಯನ್ನು ಗುರ್ತಿಸಿರುತ್ತಾರೆ. ನಂತರ ಲ್ಯಾಪ್‌ಟಾಪ್ ಮೂಲಕ ಡಿವಿಡಿಗಳನ್ನು ತಯಾರಿಸಿರುತ್ತಾರೆ. ನಂತರ ತನಿಖಾಧಿಕಾರಿಗಳು ಮಾದರಿ ಧ್ವನಿ ಸಂಗ್ರಹಿಸುವ ಅವಶ್ಯಕತೆಯಿದ್ದು, ಟ್ರ್ಯಾಪ್ ಪೂರ್ವದಲ್ಲಿ ಹಾಗೂ ಟ್ರ್ಯಾಪ್ ಸಮಯದಲ್ಲಿ ನಡೆಸಿದ ಸಂಭಾಷಣೆಯನ್ನು ಓದಲು ಪ್ರತಿಲೇಖವನ್ನು ತಯಾರಿಸಿದ್ದು, ಅದನ್ನು ಎದುರುದಾರರಿಂದ ಹಾಗೂ ದೂರುದಾರರಿಂದ ಮೂರು ಮೂರು ಬಾರಿ ಓದಿಸಿ ವಾಯ್ಸ್ ರೆಕಾರ್ಡ್‌ನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದು, ಅದನ್ನು ಲ್ಯಾಪ್ ಟಾಪ್‌ಗೆ ಡೌನ್ ಲೋಡ್ ಮಾಡಿಕೊಂಡು ಪ್ರತ್ಯೇಕ ಡಿವಿಡಿಗಳನ್ನು ತಯಾರಿಸಿರುತ್ತಾರೆ.

viii. ನಂತರ ತನಿಖಾಧಿಕಾರಿಗಳು ದೂರುದಾರರ ಅಣ್ಣನವರಾದ ಶ್ರೀ ಅಂಜಿನಪ್ಪರವರಿಗೆ ಸಂಬಂಧಿಸಿದ ಸಾಗುವಳಿ ಚೀಟಿಯ ಬಗ್ಗೆ ಅ.ಸ.ನೌ ರವರನ್ನು ಕೇಳಲಾಗಿ, ಅ.ಸ.ನೌ ರವರು ಅವರ ಟೇಬಲ್ ಮೇಲೆ ಇದ್ದ ಸಾಗುವಳಿ ಚೀಟಿಯನ್ನು ನೀಡಿದ್ದು, ಅದನ್ನು ತನಿಖಾಧಿಕಾರಿಗಳು ಜೆರಾಕ್ಸ್ ಮಾಡಿಸಿ ಹೊಸೂರು ನಾಡಕಚೇರಿಯ ಉಪತಹಶೀಲ್ದಾರ್‌ರಾದ ಶ್ರೀಮತಿ ಅಕ್ಕಮಹಾದೇವಿರವರಿಂದ ದೃಢೀಕರಿಸಿಕೊಂಡು ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ತನಿಖಾಧಿಕಾರಿಗಳು ಎದುರುದಾರರನ್ನು ದಸ್ತಗಿರಿ ಮಾಡಿದ ಬಗ್ಗೆ ಅವರ ಮೇಲಾಧಿಕಾರಿಗಳಾದ ಹೊಸೂರು ನಾಡಕಚೇರಿಯ ಉಪತಹಶೀಲ್ದಾರ್‌ರಾದ ಶ್ರೀಮತಿ ಅಕ್ಕಮಹಾದೇವಿ, ರವರಿಗೆ ತಿಳಿಸಿರುತ್ತಾರೆ.

ix. ನಂತರ ತನಿಖಾಧಿಕಾರಿಗಳು ಅ.ಸ.ನೌ ರವರಿಗೆ ದೂರುದಾರರಿಂದ ಪಡೆದ ಲಂಚದ ಹಣದ ಬಗ್ಗೆ ವಿವರಣೆಯನ್ನು ನೀಡುವಂತೆ ಸೂಚಿಸಿದಾಗ, ಎದುರುದಾರರು ತಮ್ಮ

23/6

ಸಮಜಾಯಿಷಿಯನ್ನು ನೀಡಿದ್ದು, ಅದರಲ್ಲಿ ಎದುರುದಾರರು "ಕದಿರನಹಳ್ಳಿ ಗ್ರಾಮದ ವಾಸಿಯಾದ ಶಿವಪ್ಪರವರು ಹಳೆಯ ಸಾಗುವಳಿ ಚೀಟಿಯನ್ನು ಕಿಮ್ಮತ್ತು ಕಟ್ಟಿರುತ್ತೇನೆ, ನನಗೆ ಸಾಗುವಳಿ ಚೀಟಿಯನ್ನು ನೀಡಬೇಕಾಗಿ ಅರ್ಜಿ ಕೊಟ್ಟಿರುತ್ತಾರೆ. ಅದರಂತೆ ರಾಜಸ್ವ ನಿರೀಕ್ಷಕನಾದ ನಾನು ಕದಿರೇನಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಮೂಲ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಅನುಭವದಂತೆ ಮತ್ತು ಸರ್ವೆ ನಕ್ಷೆಯಂತೆ ಈ ಹಿಂದೆ ದರಖಾಸ್ತು ಕಮಿಟಿಯಲ್ಲಿ ದರಖಾಸ್ತು ಕಡತ ತಯಾರಿಸಿದ್ದು, ಕಮಿಟಿಯಲ್ಲಿ ಪಾಸಾಗಿರುತ್ತದೆ. ಅದರಂತೆ ಶಿವಪ್ಪರವರು ಸರ್ಕಾರಕ್ಕೆ ಕಿಮ್ಮತ್ತು, ಸಾಗುವಳಿ ಚೀಟಿಯನ್ನು ನೀಡಿರುವುದಿಲ್ಲ. ಆದ್ದರಿಂದ ಶಿವಪ್ಪರವರು ಅರ್ಜಿ ನೀಡಿರುವಂತೆ ಸಾಗುವಳಿ ಚೀಟಿಯನ್ನು ನೀಡಲು ತಾಲ್ಲೂಕು ಕಚೇರಿಗೆ ಸ್ಥಳ ತನಿಖೆ ನಡೆಸಿ, ಸರ್ವೇ ನಕ್ಷೆಯಂತೆ ಮತ್ತು ಸ್ವಾಧೀನ ಅನುಭವದಂತೆ ಸಾಗುವಳಿ ಚೀಟಿಯನ್ನು ನೀಡಲು ಗ್ರಾಮದಲ್ಲಿ ಮಹಜರ್ ಮಾಡಿ ವರದಿಯನ್ನು ತಾಲ್ಲೂಕು ಕಚೇರಿಗೆ ನೀಡಿರುತ್ತೇನೆ. ನಂತರ ಸಾಗುವಳಿ ಚೀಟಿಯನ್ನು ನೀಡುವಂತೆ ಪದೇ ಪದೇ ನನ್ನ ಬಳಿ ಬಂದು ಪೀಡಿಸುತ್ತಿದ್ದ, ಅದರ ಫೀಸ್‌ನ್ನು ನೀಡುವುದಾಗಿ ಶಿವಪ್ಪರವರು ಹೇಳುತ್ತಿರುತ್ತಾರೆ. ಅದರಿಂದ ಹಣವನ್ನು ನಿರಾಕರಿಸಿದ್ದು ನಾನು ಕೆಲಸ ಮಾಡಿಕೊಡುತ್ತೇನೆ. ನನಗೆ ಯಾವುದೇ ರೀತಿಯ ಫೀಸುಗಳು ಬೇಡ ಎಂಬುದಾಗಿ ಅನೇಕ ಬಾರಿ ನಿರಾಕರಿಸಿದೆ. ಆದರೆ ಶಿವಪ್ಪರವರು ನಾಡ ಕಚೇರಿಗೆ ಬಂದು ಸಾಗುವಳಿ ಚೀಟಿಯನ್ನು ನೀಡಬೇಕು ಎಂಬುದಾಗಿ ಪೀಡಿಸುತ್ತಿದ್ದ. ನಂತರ ಇಲ್ಲಪ್ಪ ಅದು ತಾಲ್ಲೂಕು ಕಚೇರಿಗೆ ನೀಡಿರುತ್ತೇನೆ ವರದಿಯನ್ನು ನೀನು ಅಲ್ಲಿ ಪಡೆದುಕೊ ಎಂಬುದಾಗಿ ತಿಳಿಸಿರುತ್ತೇನೆ. ಆದರೂ ಸಹ ನನ್ನ ಬಳಿ ಪದೇ ಪದೇ ಬಂದು ಪೀಡಿಸುತ್ತಿದ್ದ, ಹಣದ ಆಮಿಷವನ್ನು ನೀಡುತ್ತಿದ್ದ, ನನಗೆ ಸಾಗುವಳಿ ಚೀಟಿಯನ್ನು ನೀಡಬೇಕು ಅದರ ಖರ್ಚು ವೆಚ್ಚಗಳನ್ನು ನಾನು ನೀಡುತ್ತೇನೆ. ಎಲ್ಲಾ ಜವಾಬ್ದಾರಿಯನ್ನು ನೀವೆ ತೆಗೆದುಕೊಳ್ಳಿ ಎಂಬುದಾಗಿ ಪದೇ ಪದೇ ಬಂದು ಪೀಡಿಸುತ್ತಿದ್ದ. ಒಂದು ದಿನ ನನ್ನ ಸ್ನೇಹಿತರಾದ ಪುಟ್ಟಲಿಂಗಪ್ಪ ರವರು ಅವರ ಸ್ವಂತ ಕೆಲಸಕ್ಕಾಗಿ ನನ್ನ ಬಳಿ ಬಂದಿದ್ದರು. ಆ ಸಮಯದಲ್ಲಿ ಶಿವಪ್ಪನೂ ಸಹ ನನ್ನ ಬಳಿ ಬಂದು ಹಣದ ಆಮಿಷವನ್ನು ಒಡ್ಡಿ ಪದೇ ಪದೇ ಪೀಡಿಸುತ್ತಿದ್ದರು. ನಂತರ ಶಿವಪ್ಪ ಮತ್ತು ಪುಟ್ಟಲಿಂಗಪ್ಪ ರವರು ಹಳೇ ಸ್ನೇಹಿತರಾಗಿದ್ದು ಪುಟ್ಟಲಿಂಗಪ್ಪರ ಬಳಿ ನನಗೆ ಸಾಗುವಳಿ ಚೀಟಿಯನ್ನು ಕೊಡಿಸಿಕೊಡಬೇಕು ಎಂಬುದಾಗಿ ನನ್ನ ಮುಂದೆ

23/6

10,000/–ರೂ.ಗಳನ್ನು ಪುಟ್ಟಲಿಂಗಪ್ಪ ರವರಿಗೆ ನೀಡಿ ನನ್ನ ಕೆಲಸ ಬೇಗ ಮಾಡಿಕೊಡಲು ಪುಟ್ಟಲಿಂಗಪ್ಪ ರವರ ಬಳಿ ತಿಳಿಸಿ, ಹಣವನ್ನು ಪುಟ್ಟಲಿಂಗಪ್ಪರ ಬಳಿ ನೀಡಿದರು. ನಾನು ಅದನ್ನು ಪಡೆದಿರುವುದಿಲ್ಲ ನಿರಾಕರಿಸಿದೆ. ನಂತರ ಈ ಹಣವನ್ನು ನನ್ನ ಹತ್ತಿರ ತೆಗೆದುಕೊಳ್ಳುವುದಿಲ್ಲ ನೀನೆ ಇಟ್ಟಿಕೋ ನನ್ನ ಕೆಲಸ ಮಾಡಿಕೊಡಬೇಕಾಗಿ ಪದೇ ಪದೇ ಪೀಡಿಸುತ್ತಿದ್ದ, ನಂತರ ಇವರ ಕಾಟ ತಡೆಯಲಾಗದೆ ತಾಲ್ಲೂಕು ಕಚೇರಿಗೆ ವರದಿ ನೀಡಿದ್ದ ಕಡತವನ್ನು ಚರ್ಚಿಸಿ, ಅದನ್ನು ತುಂಬ ಬಡವರು ಸರ್ ಎಂಬುದಾಗಿ ತಿಳಿಸಿ ತಹಶೀಲ್ದಾರ್‌ರವರ ಬಳಿ ಸಹಿ ಹಾಕಿಸಿರುತ್ತೇನೆ. ನಂತರ ಸಾಗುವಳಿ ಚೀಟಿಯನ್ನು ದಿನಾಂಕ:12/03/2018ರಂದು ಮಧ್ಯಾಹ್ನ 3–ಗಂಟೆ ಸಮಯಕ್ಕೆ ಶಿವಪ್ಪನಿಗೆ ಸಾಗುವಳಿ ಚೀಟಿಯನ್ನು ನೀಡಿರುತ್ತೇನೆ. ನಂತರ ಶಿವಪ್ಪರವರು ಉದ್ದೇಶಪೂರಕವಾಗಿ ನನ್ನ ಮೇಲೆ ಎಸಿಬಿ ರವರ ಬಳಿ ದೂರು ಅರ್ಜಿ ನೀಡಿ ನನ್ನನ್ನು ಸಿಕ್ಕಿ ಹಾಕಲು ಅರ್ಜಿ ನೀಡಿರುತ್ತಾರೆ. ಅದರಂತೆ ದಿನಾಂಕ: 12/03/2018ರಂದು ಮಧ್ಯಾಹ್ನ 3–ಗಂಟೆಗೆ ನನ್ನ ಬಳಿ ಬಂದು ಬಲವಂತವಾಗಿ ಹಣವನ್ನು ನೀಡಲು ಬಂದರು, ಅದನ್ನು ನಿರಾಕರಿಸಿ, ನಿನಗೆ ಸಾಗುವಳಿ ಚೀಟಿಯನ್ನು ನೀಡಿರುತ್ತೇನೆ ಎಂಬುದಾಗಿ ತಿಳಿಸಿದರು. ಪುಟ್ಟಲಿಂಗಪ್ಪರವರ ಬಳಿ ಬಂದು ಅವರ ಬಳಿ ನನಗೆ ಸಾಗುವಳಿ ಚೀಟಯನ್ನು ನೀಡಿರುತ್ತಾರೆ ಎಂಬುದಾಗಿ ತಿಳಿಸಿ ಬಲವಂತವಾಗಿ 10,000/– ರೂ.ಗಳನ್ನು ಪುಟ್ಟಲಿಂಗಪ್ಪರವರ ಜೇಬಿನ ಬಳಿ ತುರುಕಿರುತ್ತಾರೆ. ಉದ್ದೇಶಪೂರ್ವಕವಾಗಿ ನನ್ನನ್ನು ಸಿಕ್ಕಿ ಹಾಕಿಸಲು ಈ ರೀತಿಯ ವ್ಯವಸ್ಥೆಯನ್ನು ಮಾಡಿರುತ್ತಾರೆ. ನಾನು ಯಾವುದೇ ರೀತಿಯ ಹಣವನ್ನು ಶಿವಪ್ಪರವರ ಬಳಿ ಕೇಳಿರುವುದಿಲ್ಲ. ನನ್ನ ಸ್ನೇಹಿತರಾದ ಪುಟ್ಟಲಿಂಗಪ್ಪ ಮತ್ತು ನನ್ನನ್ನು ಉದ್ದೇಶ ಪೂರಕವಾಗಿ ಈ ಕೇಸಿನಲ್ಲಿ ಸಿಕ್ಕಿಸಿಹಾಕಲು ಈ ರೀತಿಯಲ್ಲಿ ವ್ಯವಸ್ಥೆಯನ್ನು ಮಾಡಿರುತ್ತಾರೆ" ಎಂದು ಸಮಜಾಯಿಷಿಯನ್ನು ನೀಡಿರುತ್ತಾರೆ. ಎದುರುದಾರರು ನೀಡಿದ ಸಮಜಾಯಿಷಿಯ ಬಗ್ಗೆ ತನಿಖಾಧಿಕಾರಿಗಳು ದೂರುದಾರರನ್ನು ಹಾಗೂ ನೆರಳುಸಾಕ್ಷಿಯವರನ್ನು ವಿಚಾರಿಸಿದಾಗ, ಎದುರುದಾರರು ನೀಡಿರುವ ಪ್ರತಿರಕ್ಷಣಾ ಹೇಳಿಕೆಯು ಸುಳ್ಳೆಂದು, ಅವರು ದೂರುದಾರರಿಂದ ಲಂಚದ ಹಣವನ್ನು ಬೇಡಿಕೆ ಇಟ್ಟು ಪಡೆದಿರುತ್ತಾರೆಂದು ತಿಳಿಸಿರುತ್ತಾರೆ.

x. ಈ ಎಲ್ಲಾ ಪ್ರಕ್ರಿಯೆಗಳನ್ನು ತನಿಖಾಧಿಕಾರಿಗಳು ದಿನಾಂಕ: 12/03/2018 ರಂದು ಸಂಜೆ 04–00 ಗಂಟೆಯಿಂದ ರಾತ್ರಿ 07–00 ಗಂಟೆಯವರೆಗೆ ಹೊಸೂರು ಗ್ರಾಮದ

23/6

ನಾಡಕಚೇರಿಯಲ್ಲಿ ಲ್ಯಾಪ್ ಟಾಪ್‌ನಲ್ಲಿ ಟೈಪ್ ಮಾಡಿಸಿದ ಟ್ರಾಪ್ ಮಹಜರ್‌ನಲ್ಲಿ ದಾಖಲಿಸಿರುತ್ತಾರೆ.

xi. ಅ.ಸ.ನೌ ರವರು ತಮ್ಮ ಸಮಜಾಯಿಷಿಯನ್ನು ದಿನಾಂಕ:02/09/2021 ರಂದು ಸಲ್ಲಿಸಿರುತ್ತಾರೆ. ಸದರಿ ಸಮಜಾಯಿಷಿಯನ್ನು ಪರಿಶೀಲಿಸಲಾಗಿ, ಎದುರುದಾರರು ಆಪಾದನೆಗಳನ್ನು ನಿರಾಕರಿಸಿರುವುದರ ಹೊರತಾಗಿ, ಆಪಾದನೆಗಳನ್ನು ಅಲ್ಲಗಳೆಯಲು ಯಾವುದೇ ಪೂರಕ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಎದುರುದಾರರು ತಮ್ಮ ಸಮಜಾಯಿಷಿಯಲ್ಲಿ "ಎಸಿಬಿರವರು ದಾಖಲಿಸಿರುವ ದೂರಿನ ವಿಚಾರಣೆಯನ್ನು ಮಾನ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರದಲ್ಲಿ ಸ್ಪೆ.ಸಂ.197/2018ರಲ್ಲಿ ಕೈಗೆತ್ತಿಕೊಂಡಿದ್ದು, ಸಾಕ್ಷಿಗಳ ವಿಚಾರಣೆ ನಡೆಯುತ್ತಿದ್ದು, ಕ್ರಿಮಿನಲ್ ಪ್ರಕರಣವು ನ್ಯಾಯಾಲಯದಲ್ಲಿ ಬಾಕಿ ಇರುವಾಗ ಕ್ರಿಮಿನಲ್ ಪ್ರಕರಣದಲ್ಲೂ ಇಲಾಖಾ ಪ್ರಕರಣದಲ್ಲೂ ಒಂದೇ ರೀತಿಯ ಆರೋಪವಿದ್ದು, ಸಾಕ್ಷಿಗಳು, ಪುರಾವೆಗಳು ಒಂದೇ ರೀತಿ ಇದ್ದ ಪಕ್ಷದಲ್ಲಿ ಇಲಾಖಾ ಪ್ರಕರಣವು ಮೊದಲು ನಡೆದಾಗ ಕ್ರಿಮಿನಲ್ ಪ್ರಕರಣದಲ್ಲಿ ನೌಕರನಿಗೆ ತನ್ನ ರಕ್ಷಣೆಗೆ ಆತಂಕವಾಗುತ್ತದೆ ಎಂದು ಕೋರಿಕೆ ಸಲ್ಲಿಸಿಕೊಂಡಾಗ, ಇಲಾಖಾ ಪ್ರಕರಣವನ್ನು ಕ್ರಿಮಿನಲ್ ಪ್ರಕರಣ ಮುಕ್ತಾಯ ಆಗುವವರೆಗೂ ತಡೆಹಿಡಿಯಬಹುದಾಗಿದೆ ಎಂದು ಸರ್ವೋಚ್ಚ ನ್ಯಾಯಾಲಯವು ಹಲವು ತೀರ್ಪಿನಲ್ಲಿ ವ್ಯಕ್ತಪಡಿಸಿದೆ ಎಂದು ಎರಡು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳನ್ನು ಉಲ್ಲೇಖಿಸಿ, ತನ್ನ ಮೇಲಿನ ಇಲಾಖಾ ವಿಚಾರಣೆಯನ್ನು ಸಹಾ ಸ್ಪೆ.ಸಿ.ಸಿ.197/2018ರ ಪ್ರಕರಣವು ಮುಕ್ತಾಯವಾಗುವ ಮುನ್ನ ನಡೆಸಬಾರದೆಂದು ಪ್ರಾರ್ಥಿಸಿಕೊಂಡಿರುತ್ತಾರೆ. ಅದೂ ಅಲ್ಲದೆ ಇದೇ ಆರೋಪದ ಮೇರೆಗೆ ತನ್ನ ವಿರುದ್ಧ ಮಾನ್ಯ ಜಿಲ್ಲಾಧಿಕಾರಿಗಳು ಇಲಾಖಾ ವಿಚಾರಣೆಯನ್ನು EST 1/CR/168/17-18 ದಿನಾಂಕ:10/10/2019ರನ್ವಯ ಈಗಾಗಲೇ ಪ್ರಾರಂಭಿಸಿದ್ದು, ಅಲ್ಲಿಯೂ ಸಹಾ ಈ ಕ್ರಿಮಿನಲ್ ಪ್ರಕರಣವು ಮುಕ್ತಾಯವಾಗುವವರೆವಿಗೂ ಇಲಾಖಾ ವಿಚಾರಣೆ ಪ್ರಕರಣವನ್ನು ಮುಂದೂಡಬೇಕೆಂದು ಮನವಿಯನ್ನು ಸಲ್ಲಿಸಿಕೊಂಡಿದ್ದು, ಆ ಕಾರಣದಿಂದ ಇಲ್ಲಿಯ ಇಲಾಖಾ ವಿಚಾರಣೆಯನ್ನು ಪ್ರಧಾನ ಸತ್ರ ನ್ಯಾಯಾಲಯದ ಪ್ರಕರಣ ಮುಕ್ತಾಯಗೊಳ್ಳುವವರೆವಿಗೂ ಮುಂದೂಡಿ ಸತ್ರ ನ್ಯಾಯಾಲಯದ ಆದೇಶದ ಅನ್ವಯ ಕ್ರಮಕೈಗೊಳ್ಳಲು ಪ್ರಾರ್ಥಿಸಿಕೊಂಡಿರುತ್ತಾರೆ. ಆದರೆ ಮಾನ್ಯ ಸತ್ರ

23/6

ನ್ಯಾಯಾಲಯದಲ್ಲಿ ನಡೆಯುತ್ತಿರುವ ವಿಚಾರಣೆಯು ಆತನು ಎಸಗಿದ ಕಲಂ 7 13(1) (ಡಿ) ಸಹ ಕಲಂ 13(2) ಲಂಚ ನಿರೋಧ ಕಾಯಿದೆ 1988ರ ಅಡಿಯಲ್ಲಿಯ ಅಪರಾಧಕ್ಕೆ ಶಿಕ್ಷೆ ಮತ್ತು ದಂಡನೆಯನ್ನು ವಿಧಿಸುವ ಬಗ್ಗೆ ನಡೆಯುತ್ತಿರುವ ವಿಚಾರಣೆ ಆಗಿರುತ್ತದೆ. ಎದುರುದಾರರು ಸರ್ಕಾರಿ ಸಾರ್ವಜನಿಕ ನೌಕರನಾಗಿದ್ದು, ತನ್ನ ಸೇವಾವಧಿಯಲ್ಲಿ ಲಂಚದ ಬೇಡಿಕೆ ಇಟ್ಟು ಲಂಚವನ್ನು ಪಡೆದು ಕರ್ತವ್ಯ ಲೋಪವೆಸಗಿರುವುದರಿಂದ ಆತನ ಮೇಲೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮಗಳನ್ನು ಉಲ್ಲಂಘನೆ ಮಾಡಿರುವುದರಿಂದ ಆತನ ಸರ್ಕಾರಿ ಸೇವೆಗೆ ಸಂಬಂಧಪಟ್ಟಂತೆ ಇಲಾಖಾ ವಿಚಾರಣೆಯನ್ನು ನಡೆಸಲು ಉದ್ದೇಶಿಸಲಾಗಿದ್ದು, ಎರಡು ವಿಚಾರಣೆಗಳು ಪ್ರತ್ಯೇಕವಾದ ವಿಚಾರಣೆಯಾಗಿರುತ್ತವೆ. ಅದೂ ಅಲ್ಲದೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ರ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಕುರಿತಂತೆ ಇಲಾಖಾ ವಿಚಾರಣೆಯನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರಂತೆ ಮಾನ್ಯ ಲೋಕಾಯುಕ್ತ ಸಂಸ್ಥೆಯಿಂದಲೇ ನಡೆಯಬೇಕಾಗಿದ್ದರಿಂದ ಎದುರುದಾರರು ನೀಡಿರುವ ಸಮಜಾಯಿಷಿಯ ಅಂಶಗಳ ಮೇರೆಗೆ ಪ್ರಕರಣವನ್ನು ವಿಚಾರಣೆಯಿಂದ ಮುಂದೂಡಲು ಅಥವಾ ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ ಹಾಗೂ ಎದುರುದಾರರು ಉಲ್ಲೇಖಿಸಿರುವ ತೀರ್ಪುಗಳು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸುವುದಿಲ್ಲ.

xii. ತನಿಖಾಧಿಕಾರಿಗಳು ಲಂಚದ ಹಣವನ್ನು ಜಪ್ತು ಮಾಡಿಕೊಂಡು ಪಂಚರ ಸಮಕ್ಷಮ ಎದುರುದಾರರನ್ನು ದಸ್ತಗಿರಿ ಮಾಡಿರುತ್ತಾರೆ. ತನಿಖಾಧಿಕಾರಿಗಳು ಸಂಪೂರ್ಣ ತನಿಖೆಯನ್ನು ಪೂರೈಸಿ, ಅಭಿಯೋಜನಾ ಮಂಜೂರಾತಿಯನ್ನು ಪಡೆದು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ. ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ತನಿಖಾಧಿಕಾರಿಗಳು ಸಂಗ್ರಹಿಸಿದ ವಸ್ತುಗಳಲ್ಲಿ ಫಿನಾಫ್ತಲೀನ್ ಅಂಶ ಇರುವುದು ದೃಢಪಟ್ಟಿರುತ್ತದೆ.

xiii. ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 2(6)ರ ಪ್ರಕಾರ ಸರ್ಕಾರಿ ನೌಕರರಾಗಿದ್ದು,

23/6

ಅದೇ ಅಧಿನಿಯಮದ 2(2)ರಂತೆ ಕರ್ತವ್ಯ ದುರುಪಯೋಗ ಪಡಿಸಿಕೊಂಡು ತಮ್ಮ ಸ್ವಲಾಭಕ್ಕಾಗಿ ಭ್ರಷ್ಟಾಚಾರ ಎಸಗಿ ಶಿಸ್ತು ಕ್ರಮಕ್ಕೆ ಒಳಪಡಿಸಲು ಅರ್ಹರಾಗಿರುವುದು ಕಂಡು ಬರುತ್ತದೆ.

2) ಮೇಲೆ ಹೇಳಿದ ಕಾರಣಕ್ಕಾಗಿ ಅ.ಸ.ನೌ ರವರ ಮೇಲೆ ಶಿಸ್ತು ಕ್ರಮಕ್ಕಾಗಿ ಇಲಾಖಾ ವಿಚಾರಣೆ ನಡೆಸಲು ಸಂಬಂಧ ಪಟ್ಟ ಪ್ರಾಧಿಕಾರಕ್ಕೆ ಏಕೆ ಶಿಫಾರಸ್ಸು ಮಾಡಬಾರದು ಎನ್ನುವ ಬಗ್ಗೆ, ಅ.ಸ.ನೌ ರವರಿಂದ ಕಾರಣ ಪಡೆಯಲು ಪರಿವೀಕ್ಷಣಾ ಟಿಪ್ಪಣಿಯನ್ನು ಎದುರುದಾರರಿಗೆ ಕಳುಹಿಸಲಾಗಿ, ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ತಮ್ಮ ಉತ್ತರವನ್ನು ಸಲ್ಲಿಸಿದ್ದಾರೆ. ಆದರೆ ಅ.ಸ.ನೌ ರವರು ನೀಡಿರುವ ಉತ್ತರದಲ್ಲಿ, ಅವರ ವಿರುದ್ಧದ ನಡವಳಿಯನ್ನು ಕೈ ಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

3) ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡುಬರುತ್ತದೆ.

4) ಅದಲ್ಲದೆ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1) ರ ಅಡಿಯಲ್ಲಿ ದುರ್ವತನೆ/ದುರ್ನಡತೆ ಕಂಡುಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದ್ದು ಹಾಗೂ ಅ.ಸ.ನೌ ರವರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ)ರಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದ ಮೇರೆಗೆ ಸರ್ಕಾರವು ಮೇಲೆ ಉಲ್ಲೇಖಿಸಿದ ಆದೇಶದಲ್ಲಿ ಇಲಾಖಾ ವಿಚಾರಣೆ ನಡೆಸಲು ಅನುಮತಿ ನೀಡಿರುತ್ತದೆ. ಅದರಂತೆ, ಗೌರವಾನ್ವಿತ ಉಪಲೋಕಾಯುಕ್ತರವರು, ಅಪರ ನಿಬಂಧಕರು, ವಿಚಾರಣೆಗಳು-11 ರವರಿಗೆ ವಿಚಾರಣೆ

23/6

ನಡೆಸಿ ವರದಿಯನ್ನು ಸಲ್ಲಿಸಲು ನೇಮಕ/ನಾಮನಿರ್ದೇಶನ ಮಾಡಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

8. Notice of Articles of charge, statement of imputation of misconduct with list of witnesses and documents was served upon the DGO. In response to the service of articles of charge, DGO entered appearance before this authority on 31/03/2023. In the course of first oral statement of the DGO recorded on 31/03/2023, he pleaded not guilty and claimed to be enquired. **The Date of Retirement of DGO is 31/07/2041.**

9. DGO has not filed his written statement.

10. On 20/05/2023 DGO appeared in person and filed application with documents denying the allegations made in the articles of charge and statement of imputations of misconduct and further submitted that, even prior to the G.O. No.RD 27 BDP 2022, dated:02/09/2022 of entrustment of this enquiry to this authority, the disciplinary authority, on the basis of the letter No.07/ಅಪರಾಧ/ಎಸಿಬಿ/ಕೇಂ.ವ/2018, ದಿನಾಂಕ:19/03/2018 sent by Superintendent of Police, ACB, Bengaluru, the D.C., Chikkaballapura decided to hold the Departmental enquiry against the present DGO under Order No.ಇಎಸ್‌ಟಿ()ಸಿಆಋ/168/2017-18, ದಿನಾಂಕ:10/10/2019 and accordingly proceeded to appoint Sri.Sifgathulla, Thasildar Grade-1, Gudibande Taluk, Gudibande as the Enquiry Officer and Deputy Thasildar, Guluru Nadakacheri, Bagepalli Taluk as the Presenting Officer. The xerox copy of said order and other connected documents are

23/6

furnished. It is also seen from the records that the evidence of the disciplinary authority has already been completed and the enquiry office has submitted the report to D.C., Chikkaballapura.

11. The learned Presenting Officer has filed objection contending that the allegation against DGO is that he was demanding bribe and accepted the same through his friend Puttalingegowda and was caught red handed. That in the Departmental Enquiry proceedings before the Thasildar, I.O. and Shadow Witness are not examined and CDRs are not marked. That there is no impartial enquiry conducted. That the DGO has to challenge the entrustment order passed by the Government of Karnataka before Hon'ble KSAT. Hence, prays to dismiss the application.

12. On perusal of the G.O. No.ಇಎಸ್‌ಟಿ()ಸಿಆಋು/168/2017-18, ದಿನಾಂಕ:10/10/2019 appointing enquiry officer to conduct enquiry against present DGO it is much prior to the G.O. No.RD 27 BDP 2022, dated:02/09/2022 entrusting this enquiry to this authority and on perusal of the AOC served to the present DGO by the disciplinary authority and the AOC served here on the DGO in this proceeding do make it clear that both the enquiries are on the same set of charges.

13. In view of the decision of the Hon'ble Supreme Court in the case of Nandakumar Verma V/s State of Jharkhand and others reported in (2012) 3, SCC 580, the conducting of a second enquiry on the very same charges is not justified. As such, this proceedings has to be closed.

14. In view of the above facts, on 13/06/2023 file is placed before Hon'ble Upalokayukta for a kind approval that the departmental enquiry against the DGO-SRI.N.M.KIRAN KUMAR may be closed.

15. Hon'ble Upalokayukta on 15/06/2023 approved para 18 of the order sheet and ordered to close the case and to send report accordingly.

16. Hence, this report is submitted to the Hon'ble Upalokayukta in a sealed cover for kind perusal and for further action in the matter.

23/6/2023

**(J.P. Archana)**
Additional Registrar (Enquiries-11),
Karnataka Lokayukta,
Bangalore.